ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 90 (24)

2) ಸದಸ್ಯರ ಹೆಸರು : ಶ್ರೀ ಹೆಚ್.ಎಂ.ರಮೇಶ್ ಗೌಡ
(ವಿಧಾನ ಸಭೆಯಿಂದ ಚುನಾಯಿತರಾದವರು)

3) ಉತ್ತರಿಸುವ ದಿನಾಂಕ : 21-09-2020.

4) ಉತ್ತರಿಸುವವರು : ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಕಳೆದೆರಡು ವರ್ಷಗಳಿಂದ ಕರ್ನಾಟಕದ ಪ್ರಸಿದ್ಧ ಅಭಯಾರಣ್ಯಗಳು ಹಾಗೂ ಹುಲಿ ಸಂರಕ್ಷಿತ ಅರಣ್ಯಗಳೂ ಆದ ಬಂಡೀಪುರ, ನಾಗರಹೊಳೆ ಹಾಗೂ ಗೋಪಾಲಸ್ವಾಮಿ ಬೆಟ್ಟದಲ್ಲಿ ಬೇಸಿಗೆಯಲ್ಲಿ ಬೆಂಕಿ ಕಾಣಿಸಿಕೊಂಡಿರುವ ಹಿನ್ನೆಲೆಯಲ್ಲಿ ಈ ಬಾರಿ ಬೆಂಕಿ ನಿಯಂತ್ರಣಕ್ಕೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ; (ಮಾಹಿತಿ ನೀಡುವುದು)	ಕರ್ನಾಟಕದ ಪ್ರಸಿದ್ಧ ಅಭಯಾರಣ್ಯಗಳು ಹಾಗೂ ಹುಲಿ ಸಂರಕ್ಷಿತ ಅರಣ್ಯಗಳೂ ಆದ ಬಂಡೀಪುರ, ನಾಗರಹೊಳೆ ಹಾಗೂ ಗೋಪಾಲಸ್ವಾಮಿ ಬೆಟ್ಟದಲ್ಲಿ ಬೆಂಕಿ ನಿಯಂತ್ರಣಕ್ಕೆ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ. 1. ಹಾಲಿ ಇರುವ ಬೆಂಕಿ ರೇಖೆಯನ್ನು ನಿರ್ವಹಣೆ ಮಾಡಲಾಗುತ್ತಿದೆ. 2. ಸೂಕ್ಷ್ಮ ಪ್ರದೇಶದಲ್ಲಿ ಬೆಂಕಿ ಕಾವಲುಗಾರರನ್ನು ನೇಮಿಸಿ ಬೆಂಕಿಯನ್ನು ತಡೆಗಟ್ಟಲು ಕ್ರಮ ವಹಿಸಲಾಗುತ್ತಿದೆ. 3. ಕ್ಷೇತ್ರ ಸಿಬ್ಬಂದಿಗಳಿಗೆ ವಾಕಿ ಟಾಕಿಗಳು ಹಾಗೂ ವಲಯಗಳಲ್ಲಿ ಸ್ಥಿರ ನಿಸ್ತಂತು ಮತ್ತು ಮೊಬೈಲ್ ಉಪಕರಣಗಳನ್ನು ಅಳವಡಿಸಿ, ಸಂದೇಶಗಳನ್ನು ಆಗಿಂದಾಗ್ಗೆ ರವಾನಿಸಲು ಕ್ರಮ ವಹಿಸಲಾಗಿದೆ. 4. ಸಿಬ್ಬಂದಿಗಳಿಗೆ ಗಸ್ತು ಕಾರ್ಯಕ್ಕಾಗಿ ವಾಹನ ಸೌಲಭ್ಯ ಒದಗಿಸಲಾಗುತ್ತಿದೆ. 5. ಕಾಡ್ಗಿಚ್ಚು ಹರಡುವಕುರಿತು ವೀಕ್ಷಣೆ ಮಾಡಲು ವೀಕ್ಷಣಾ ಗೋಪುರಗಳನ್ನು ನಿರ್ಮಿಸಲಾಗಿದೆ. 6. ಅರಣ್ಯ ಪ್ರದೇಶದ ಬೆಂಕಿಯಿಂದ ಉಂಟಾಗುವ ಪ್ರತಿಕೂಲ ಪರಿಣಾಮದ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸಲು ಬಾನುಲಿ ಕೇಂದ್ರದ ಮೂಲಕ ಪ್ರಚಾರ ಮಾಡಲಾಗುವುದು. 7. ಸಿಬ್ಬಂದಿಗಳಿಗೆ ನೀರು ಸಿಂಪಡಿಸುವ ಯಂತ್ರ, ಕಳೆ ಕೀಳುವ ಯಂತ್ರ, ಚೈನ್ ಸಹ ಯಂತ್ರಗಳನ್ನು ಒದಗಿಸಲಾಗುವುದು.

ಕ್ರಸಂ	ಪ್ರಶ್ನೆ	ಉತ್ತರ
		8. ದ್ವಿಚಕ್ರ ವಾಹನಗಳಿಗೆ ನೀರು ಸಿಂಪಡಿಸುವ ಸಣ್ಣ ಸಾಮರ್ಥ್ಯದ ಯಂತ್ರವನ್ನು ಅಳವಡಿಸಿ, ಬೆಂಕಿ ಬಿದ್ದಕೂಡಲೇ ನೀರು ಸಿಂಪಡಿಸಿ, ಬೆಂಕಿ ಹತೋಟಿಗೆ ತರುವ ಕುರಿತು ಕ್ರಮ ಕೈಗೊಳ್ಳಲಾಗುವುದು. 9. ಬೆಂಕಿ ತಡೆಗಟ್ಟುವ ಕುರಿತು ಇಲಾಖಾ ಸಿಬ್ಬಂದಿಗಳಿಗೆ ಆಗಿಂದಾಗ್ಗೆ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗುವುದು. 10. ಅರಣ್ಯ ಬೆಂಕಿ ಬಗ್ಗೆ ಅರಣ್ಯದಂಚಿನ ಗ್ರಾಮೀಣ ಪ್ರದೇಶದಲ್ಲಿ ಬೀದಿ ನಾಟಕವನ್ನು ಹಮ್ಮಿಕೊಳ್ಳಲಾಗುವುದು. 11. ಅರಣ್ಯದ ಗಡಿಯಂಚಿನಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ಅಗ್ನಿಶಾಮಕ ದಳದ ವಾಹನವನ್ನು ಸಿಬ್ಬಂದಿಯೊಂದಿಗೆ ಅರಣ್ಯ ಪ್ರದೇಶದಲ್ಲಿ ನಿಯೋಜಿಸಲಾಗುತ್ತಿದೆ. 12. ಡ್ರೋನ್ ಕ್ಯಾಮರಾ ಸೇವೆಯನ್ನು ಅರಣ್ಯ ಪ್ರದೇಶದ ಗಡಿ ರೇಖೆಯಲ್ಲಿ ಉಪಯೋಗಿಸಲಾಗುತ್ತಿರುತ್ತದೆ. 13. ತುರ್ತು ಸಂದರ್ಭಗಳನ್ನು ನಿಭಾಯಿಸುವುದಕ್ಕಾಗಿ ವಾಯುಸೇನೆಯ ಹೆಲಿಕಾಪ್ಟರ್ ಸೇವೆಯನ್ನು ಪಡೆದುಕೊಳ್ಳಲಾಗುವುದು.
ಆ)	ಪಶ್ಚಿಮಘಟ್ಟಗಳು ಹಾದು ಹೋಗುವ ಅರಣ್ಯ, ಕಪ್ಪತಗುಡ್ಡ ಸೇರಿದಂತೆ ಕರ್ನಾಟಕದ ವಿವಿಧ ಅರಣ್ಯ ಪ್ರದೇಶಗಳಲ್ಲಿ ಪ್ರತೀ ವರ್ಷ ಬೆಂಕಿ ಕಾಣಿಸಿಕೊಳ್ಳುತ್ತಿದ್ದು, ಇವುಗಳ ನಿಯಂತ್ರಣಕ್ಕೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ;	ಪಶ್ಚಿಮಘಟ್ಟ ಹಾಗೂ ಕಪ್ಪತ್ತಗುಡ್ಡದ ಅರಣ್ಯ ಪ್ರದೇಶದಲ್ಲಿ ಬೆಂಕಿ ನಿಯಂತ್ರಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ: 1. ಬೆಂಕಿ ನಿಯಂತ್ರಣ ಸಾಮಗ್ರಿಗಳ ಖರೀದಿ 2. ಬೆಂಕಿ ರೇಖೆ ರಚನೆ, ನಿರ್ಮಾಣ ಮತ್ತು ನಿರ್ವಹಣೆ 3. ವೀಕ್ಷಣಾ ಗೋಪುರ, ಗುಡಿಸಲು, ನೀರಿನ ಟ್ಯಾಂಕು ನಿರ್ಮಾಣ 4. ಮಣ್ಣು ಮತ್ತು ತೇವಾಂಶದ ಸಂರಕ್ಷಣೆ 5. ಜಾಗೃತಿ ಅಭಿಯಾನ 6. ಇಲಾಖೆಯ ಸಿಬ್ಬಂದಿಗಳಿಗೆ ಅಗ್ನಿಶಾಮಕ ದಳದಿಂದ ಬೆಂಕಿ ನಿಯಂತ್ರಿಸುವ ಕುರಿತು ತರಬೇತಿ ಮತ್ತು ಕಾರ್ಯಾಗಾರ. 7. ಬೆಂಕಿ ರಕ್ಷಣೆಗಾಗಿ ಗ್ರಾಮಗಳನ್ನು ಮತ್ತು ಸಮುದಾಯಗಳನ್ನು ಪಾಲ್ಗೊಳ್ಳಲು ಪ್ರೋತ್ಸಾಹಿಸುವುದು.

<table>
<tr><th>ಕ್ರಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಇ)</td><td>ಕಾಡಿನ ಬೆಂಕಿ ನಿಯಂತ್ರಿಸಲು ಸಿಬ್ಬಂದಿಗಳಿಗೆ ಸೂಕ್ತ ತರಬೇತಿ ನೀಡಲಾಗಿದೆಯೇ; ಅರಣ್ಯ ಇಲಾಖೆಯಲ್ಲಿ ಇನ್ನೂ ಭರ್ತಿಯಾಗಬೇಕಿರುವ ಫಾರೆಸ್ಟ್ ಗಾರ್ಡ್, ವಾಚರ್ಸ್ ಹುದ್ದೆಗಳ ನೇಮಕಾತಿಗಾಗಿ ಸರ್ಕಾರ ಯಾವ ಕ್ರಮ ಕೈಗೊಂಡಿದೆ?</td><td>ಅರಣ್ಯ ಸಿಬ್ಬಂದಿಗಳಾದ ವನಪಾಲಕರು, ಅರಣ್ಯ ರಕ್ಷಕರು ಮತ್ತು ಅರಣ್ಯ ವೀಕ್ಷಕರಿಗೆ ಅವರ ತರಬೇತಿಯ ಅವಧಿಯಲ್ಲಿಯೆ ಬೆಂಕಿ ನಿರ್ವಹಣೆ ಮತ್ತು ನಿಯಂತ್ರಣ ಕುರಿತು ತರಬೇತಿ ನೀಡಲಾಗುತ್ತಿದೆ.

ಅರಣ್ಯ ಇಲಾಖೆಯಲ್ಲಿ ಅರಣ್ಯ ರಕ್ಷಕ ಮತ್ತು ಅರಣ್ಯ ವೀಕ್ಷಕ ಹುದ್ದೆಗಳಿಗೆ ನೇಮಕಾತಿ ಮಾಡಲು ಆರ್ಥಿಕ ಇಲಾಖೆಯು ಅನುಮೋದನೆ ನೀಡಿದಂತೆ ಕಾಲಕಾಲಕ್ಕೆ ಭರ್ತಿ ಮಾಡಲಾಗುತ್ತಿದೆ. ಮಂಜೂರಾದ, ಭರ್ತಿಯಾದ ಹಾಗೂ ಖಾಲಿ ಇರುವ ಹುದ್ದೆಗಳ ವಿವರ ಈ ಕೆಳಕಂಡಂತಿವೆ.
<table>
<tr><th>ವಿವರ</th><th>ಅರಣ್ಯರಕ್ಷಕ</th><th>ಅರಣ್ಯ ವೀಕ್ಷಕ</th></tr>
<tr><td>ಮಂಜೂರಾದ ಹುದ್ದೆ</td><td>3994</td><td>1177</td></tr>
<tr><td>ಭರ್ತಿಯಾದ ಹುದ್ದೆ</td><td>3009</td><td>642</td></tr>
<tr><td>ಖಾಲಿಯಿರುವ ಹುದ್ದೆ</td><td>985</td><td>535</td></tr>
</table>
ದಿನಾಂಕ:02.03.2020 ರಂದು 339 ಅರಣ್ಯರಕ್ಷಕ ಹುದ್ದೆಗಳ ನೇಮಕಾತಿಗಾಗಿ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ. ಆದರೆ ಸರ್ಕಾರದ ಆರ್ಥಿಕ ಇಲಾಖೆಯ ಸುತ್ತೋಲೆ ದಿನಾಂಕ: 06.07.2020 ರಲ್ಲಿ ಕೋವಿಡ್-19 ಸಾಂಕ್ರಾಮಿಕ ರೋಗದಕಾರಣ ಸಂಪನ್ಮೂಲವನ್ನು ಕ್ರೋಢೀಕರಿಸಲು ಮಿತವ್ಯಯ ಪಾಲಿಸಬೇಕಾಗಿದ್ದು, 2020-21ನೇ ಸಾಲಿನ ಎಲ್ಲಾ ನೇರ ನೇಮಕಾತಿ ಪ್ರಕ್ರಿಯೆಗಳನ್ನು ಮುಂದಿನ ಆದೇಶದವರೆಗೆ ತಡೆ ಹಿಡಿಯುವಂತೆ ಆದೇಶಿಸಲಾಗಿರುತ್ತದೆ. ಆದ್ದರಿಂದ, 339 ಅರಣ್ಯ ರಕ್ಷಕ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯನ್ನು ತಾತ್ಕಾಲಿಕವಾಗಿ ತಡೆಹಿಡಿಯಲಾಗಿರುತ್ತದೆ. ಅರಣ್ಯ ವೀಕ್ಷಕ ವೃಂದದಲ್ಲಿ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಲು ಸಲ್ಲಿಸಿರುವ ಪ್ರಸ್ತಾವನೆಗೆ ಆರ್ಥಿಕ ಇಲಾಖೆಯು ಅನುಮೋದನೆ ನೀಡಿದ ನಂತರ ನೇಮಕಾತಿ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗುವುದು.</td></tr>
</table>

ಸಂಖ್ಯೆ: ಅಪಜೀ 144 ಎಫ್‌ಡಬ್ಲ್ಯೂಎಲ್ 2020

(ಆನಂದ್ ಸಿಂಗ್)
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು